ಕೊಡಬೇಕು.

ಅಧ್ಯಕ್ಷರು: ಆಯಿತು, ಅವರು ಹೇಳಿದ್ದಾರೆ ತಾವು ಕುಳಿತುಕೊಳ್ಳಿ. ಮಾನ್ಯ ಕಾಗೇರಿಯವರೆ, ತಾವು ಭಾಷಣವನ್ನು ಪ್ರಾರಂಭ ಮಾಡಿ.

ಶ್ರೀ ಗೋವಿಂದ ಎಂ ಕಾರಜೋಳ: ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಗೇರಿಯವರು ಪ್ರಸ್ತಾಪ ಮಾಡಲಿ, ಇವತ್ತು ಏನಾಗಿದೆ ಎಂದರೆ, 2005–06ನೇ ಸಾಲಿನ ಡಿಮ್ಯಾಂಡ್ ಮೇಲೆ ನಾಲ್ಕು ಪ್ರಮುಖವಾದ ಇಲಾಖೆಗಳನ್ನು ಇವತ್ತೇ ಕಲಾಪದಲ್ಲಿ ಹಾಕಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ ಸುಮಾರು 3 ಸಾವಿರ ಕೋಟಿ ರೂಪಾಯಿಗಳು. . . . .

ಅಧ್ಯಕ್ಷರು: ಹೌದು. ಸ್ವಾಮಿ ಏನು ಮಾಡುವುದು ಹೇಳಿ. ಈಗ ಹೆಚ್ಚು ಕಡಿಮೆ 3 ದಿವಸ ಒಂದಲ್ಲ ಒಂದು ಕಾರಣಕ್ಕಾಗಿ ಮುಂದಕ್ಕೆ ಹೋಗಿದೆ. ಆದ್ದರಿಂದ ಇನ್ನೇನು ಮಾಡುವುದಕ್ಕಾಗುತ್ತದೆ.

ಶ್ರೀ ಗೋವಿಂದ ಎಂ ಕಾರಜೋಳ: ತಾವು ಹೆಚ್ಚಿನ ಸಮಯವನ್ನು ಕೊಟ್ಟು ಡೈಲಿ ಒಂದೊಂದು ಅದನ್ನು ಇಟ್ಟರೆ ಅನುಕೂಲವಾಗುತ್ತದೆ. ಇದು ಬಹಳ ಮಹತ್ವವಾದ ವಿಷಯವಾಗಿದೆ.

ಅಧ್ಯಕ್ಷರು: ಆಯಿತು. ಅದನ್ನು ಅಡ್ಜಸ್ಟ್ ಮಾಡೋಣ. ಇವತ್ತು ಏನು ಡಿಮಾಂಡ್ಸ್ ಇದೆ, ಇವತ್ತು ಕಲಾಪ ಹೆಚ್ಚು ಹೊತ್ತು ನಡೆಯಲಿ, ಎಲ್ಲಿಯವರೆವಿಗೆ ಹೋಗುತ್ತದೆ ಅಲ್ಲಿಯವರೆಗೆ ನಡೆಯಲಿ. ನಾಳೆ ಅಥವಾ ನಾಳಿದ್ದು ಇನ್ನು ಮುಗಿಸೋಣ. ನಂತರ ನಾಳೇ ಮತ್ತು ನಾಳಿದ್ದು ಇರುವುದನ್ನು ಅಡ್ಜಸ್ಟ್ ಮಾಡಿ ಎಷ್ಟೆಷ್ಟು ಗಂಟೆಗೆ ಇಲಾಖೆಯ ಬೇಡಿಕೆ ಅದನ್ನು ಪ್ರಾಮುಖ್ಯತೆಯ ಮೇಲೆ ಮಾಡೋಣ. ತಾವು ದಯಮಾಡಿ ಕುಳಿತುಕೊಳ್ಳಿ. ಈಗ ಮಾನ್ಯ ವಿಶ್ವೇಶ್ವರ ಹೆಗಡೆಯವರು ತಾವು ಮಾತನಾಡಿ. ಮಾನ್ಯ ಹೆಗಡೆಯವರು ತಾವು ಭಾಷಣ ಪ್ರಾರಂಭ ಮಾಡುವುದಕ್ಕೆ ಮುಂಚೆ ಒಂದು ಪ್ರಕಟಣೆ ಇದೆ. ಅದನ್ನು ಓದುತ್ತೇನೆ.

ಪ್ರ ಕ ಟ ಣೆ

ಕರ್ನಾಟಕ ವಿಧಾನಮಂಡಲದ ವತಿಯಿಂದ ದಿನಾಂಕ:22 ಮತ್ತು 23ನೇ ಜುಲೈ 2005ರಲ್ಲಿ ಶಾಸಕರ ದಿನಾಚರಣೆಯನ್ನು ನಡೆಸಲು ತೀರ್ಮಾನಿಸಲಾಗಿದೆ. ಈ ಸಂದರ್ಭದಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯ ಕ್ರಮಗಳನ್ನು ಮಾನ್ಯ ಸದಸ್ಯರುಗಳಿಗಾಗಿ ಹಮ್ಮಿಕೊಳ್ಳಲಾಗಿದೆ. ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣ ಹಾಗೂ

ಕಂಠೀರವ ಕ್ರೀಡಾಂಗಣದಲ್ಲಿ ಕ್ರೀಡೆಗಳನ್ನು ನಡೆಸಲಾಗುವುದಲ್ಲದೆ, ಸಾಂಸ್ಕೃತಿಕ ಕಾರ್ಯಕ್ರಮಗಳು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಸಲಾಗುವುದು. ಈ ಸಂಬಂಧವಾಗಿ ದಿನಾಂಕ:04–07–2005ರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಶಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ಸಂಜೆ 6.30 ಗಂಟೆಯಿಂದ 8.00 ಗಂಟೆಯವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಅಭ್ಯಾಸ ಮಾಡಲು ವ್ಯವಸ್ಥೆ ಮಾಡಲಾಗಿದೆ. ಹಾಗೆಯೇ ದಿನಾಂಕ:05–07–2005 ರಿಂದ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಇಚ್ಛೆಯುಳ್ಳ ಸನ್ಮಾನ್ಯ ಸದಸ್ಯರುಗಳು ಆಯಾಯ ವಿಭಾಗದಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ಇದಕ್ಕೆ ಸಂಬಂಧಪಟ್ಟಂತೆ ಲಘು ಪ್ರಕಟಣೆಯನ್ನು ಹೊರಡಿಸಲಾಗಿದೆ.

* * *

ಅಧ್ಯಕ್ಷರು : ಮಾನ್ಯ ಕಾಗೇರಿಯವರೆ, ತಾವು ಭಾಷಣವನ್ನು ಪ್ರಾರಂಭ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೇ,. ..

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಒಂದು 10 ನಿಮಿಷಗಳ ಕಾಲ ಮಾತನಾಡಲಿ. ನಾವು ಸದನಕ್ಕೆ ಬಂದಿದ್ದೇವೆ. ಸದನವು 5 ಗಂಟೆಗೆ ಮುಗಿಯಬೇಕಾಗಿತ್ತು. ಅವರು ಭಾಷಣವನ್ನು ಪ್ರಾರಂಭ ಮಾಡಲಿ, ಅವರು ನಾಳೆಯೂ ಮುಂದುವರೆಸುತ್ತಾರೆ.

ಅಧ್ಯಕ್ಷರು: 6 ಗಂಟೆಯವರೆಗೂ ಕಲಾಪ ನಡೆಯಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಬೇಡಸಾರ್, 5.30 ಗಂಟೆಗೆ ಮುಗಿಸಿ. ನಾವು ಬೇರೆ ಕಾರ್ಯಕ್ರಮವನ್ನು ಒಪ್ಪಿಕೊಂಡಿದ್ದೇವೆ. ಅವರು 15 ನಿಮಿಷ ಮುಂದುವರೆಸುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೇ, 11ನೇ ಮಾರ್ಚಿಗೆ 2005–06 ನೇ ಸಾಲಿನ ಆಯವ್ಯಯವನ್ನು ಮಾನ್ಯ ಹಣಕಾಸಿನ ಸಚಿವರಾದಂತ ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು 4 ತಿಂಗಳ ಒಂದು ಲೇಖಾನುದಾನವನ್ನು ಕೋರಿ ಈ ಎಲ್ಲಾ ಬೇಡಿಕೆಗಳನ್ನು ಮಂಡಿಸಿದ್ದಾರೆ. ಬೇಡಿಕೆ ಸಂಖ್ಯೆ: 1 ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ